# Dan 2 & 7

ದೇವರು ಮನುಷ್ಯನು ವಾಸಮಾಡಲು ಯೋಗ್ಯವಾದ ಸ್ಥಳವನ್ನು ತನ್ನ ಸೃಷ್ಟಿಯ ಕ್ರಮದಲ್ಲಿ ಉಂಟುಮಾಡಿದನು. ಆತನು ಭೂಮಿ, ಆಕಾಶ, ಗಿಡ, ಮರ, ಪಕ್ಷಿ–ಪ್ರಾಣಿ ಇತ್ಯಾದಿ ಹೀಗೆ ದೇವರು ಮನುಷ್ಯನಿಗೋಸ್ಕರ 6 ದಿನದ ಕಾಲ ಇವೆಲ್ಲವುಗಳನ್ನು ಸೃಷ್ಟಿಯ ಕಾರ್ಯದಲ್ಲಿ ಸೃಷ್ಟಿ ಮಾಡಿದರು. ಇಲ್ಲಿ 6 ದಿನದ ಕಾಲ ಇವೆಲ್ಲವುಗಳನ್ನು ಸೃಷ್ಟಿ ಮಾಡಿದರು. ಇಲ್ಲಿ 6 ದಿನ ಅಂದರೆ ದೇವರಿಗೆ 1 ದಿನ ಮನುಷ್ಯರಿಗೆ 7000 ವರ್ಷ, ಅಂತೆಯೇ ನಮ್ಮ ಕ್ರಿಸ್ತ ಯೇಸುವಿಗೆ 1 ದಿನ ಮನುಷ್ಯರಿಗೆ 1000ವರ್ಷ ಅದೇ ರೀತಿ ಪ್ರವಾದಿಗೆ 1ದಿನ 1ವರ್ಷದಂತಿದೆ ಯೆಹೆಜ್ಕೇಲ 4:6; ದೇವರು 6x7000=42,000 ವರ್ಷ ಸೃಷ್ಟಿಯ ಕಾರ್ಯವನ್ನು ಮಾಡಿ ಮನುಷ್ಯರಿಗೆ ಒಂದು ಯೋಗ್ಯ ಸ್ಥಳವನ್ನು ನೀಡುವುದು ಮಾತ್ರವಲ್ಲದೆ ಮಾನವರನ್ನು ಸಹ ತನ್ನ ಹೊಲಿಕೆಗೆ ಸರಿಯಾಗಿ ಸೃಷ್ಟಿಸಿ ಆತನನ್ನು ಇವೆಲ್ಲವುಗಳ ಮೇಲೆ ದೊರೆತನ ಮಾಡುವಂತೆ ಆತನನ್ನು ರಾಜನನ್ನಾಗಿ ನೇಮಿಸಿದನು. ಆದಿ:1:29. ಭೂಲೋಕದಲ್ಲಿ ದೇವರು ಪ್ರಪ್ರಥಮವಾಗಿ ಉಂಟುಮಾಡಿದ ರಾಜ್ಯ ಯಾವುದೆಂದರೆ ಏದೇನ್ ತೋಟ ಈ ರಾಜ್ಯದ ಅರಸನನ್ನಾಗಿ ದೇವರು ತನ್ನ ಪ್ರಥಮ ಸೃಷ್ಟಿ ಆದಾಮನನ್ನು ನೇಮಿಸಿದನು.

ಕೀರ್ತನೆ 8:4,5. ಪ್ರಭಾವವನ್ನು ಮಾನವನ್ನು ಕಿರೀಟವಾಗಿ ಇಟ್ಟಿ. ದೇವರು ಆದಾಮನಿಗೆ ನೀನು ಈ ಏದೇನ್ ತೋಟದಲ್ಲಿರುವ ಎಲ್ಲಾ ಮರದ ಹಣ್ಣನ್ನು ತಿನ್ನಬಹುದು ಆದರೆ ತೋಟದ ಮಧ್ಯದಲ್ಲಿರುವ ಒಳ್ಳೆದರ ಕೆಟ್ಟದರ ಅರಿವನ್ನು ಉಂಟು ಮಾಡುವ ಹಣ್ಣನ್ನು ಮಾತ್ರ ತಿನ್ನಬಾರದು ಅದನ್ನು ತಿಂದ ದಿನವೇ ನೀನು ಸತ್ತೇ ಹೋಗುವಿ ಎಂದು ಹೇಳಿದರು. ಆದರೆ ಆದಾಮನು ಆ ಹಣ್ಣನು ತಿಂದ ಕಾರಣ ದೇವರು ಅವನನ್ನು ಏದೇನ್ ತೋಟದಿಂದ ಹೊರಗೆ ಹಾಕಿದರು. ರಾಜನಾಗಿದ್ದ ಆದಾಮನು ಹಣ್ಣನ್ನು ತಿಂದ ದಿನವೇ ತನ್ನ ರಾಜ್ಯವನ್ನು ರಾಜ್ಯ ಬಾರವನ್ನು ಕಳೆದುಕೊಂಡನು ಮತ್ತು ಇವನು ರಾಜನ ಪದವಿಯಿಂದ ದಾಸನ ಸ್ಥಿತಿಗೆ ಬಂದನು ಇವನು ಯಾರಿಗೆ ದಾಸನಾದನೆಂದರೆ ಪಾಪಕ್ಕೆ ದಾಸನಾದನು ರಾಜ್ಯವು ಇಲ್ಲದಂತಾಯಿತು ಮತ್ತು ದೇವರು ಆದಾಮನಿಗೆ ನಿನ್ನ ನಿಮಿತ್ತ ಈ ಭೂಮಿಗೆ ಶಾಪ ಬಂತು ಎಂದು ಹೇಳಿ ಅವನನ್ನು ವಾಸಿಸಲು ಯೋಗ್ಯವಲ್ಲದ ಅಂದರೆ ಏದೇನ್ ತೋಟದಲ್ಲಿದ್ದ ಯಾವ ಸಮೃದ್ಧಿಯೂ, ಇರದ ಒಂದು ಭೂಮಿಗೆ ಅವನನ್ನು ಕಳುಹಿಸಿಬಿಟ್ಟನು ಹೀಗೆ ದೇವರು ಆದಾಮನ ಅವಿದೇಯತೆಗೆ ದಂಡನೆಯನ್ನು ಕೊಡುತ್ತಾರೆ ಮತ್ತು ದೇವರು ಭೂಲೋಕದಲ್ಲಿ ಸ್ಥಾಪಿಸಿದ ಮೊದಲನೆ ರಾಜ್ಯ ಇಲ್ಲದಂತಾಯಿತು.

ಆದಾಮನನ್ನು ಸೃಷ್ಟಿಯಾದ ಸುಮಾರು 2000 ವರ್ಷಗಳಾದ ನಂತರ ಪುನಃ ದೇವರು ಇದೇ ತನ್ನ ರಾಜ್ಯವನ್ನು ಇಸ್ರೇಯೇಲ್‌ನಲ್ಲಿ ಸ್ಥಾಪಿಸಿದರು. ಎಂದು ನಾವು ಸತ್ಯವೇದದಲ್ಲಿ ನೋಡುತ್ತೇವೆ. ಆದಾಮನ ನಂತರ ಭೂಲೋಕದಲ್ಲಿ ಅನೇಕ ರಾಜ್ಯಗಳು ಇದ್ದವು ಉದಾ: ಆದಿ 14 : 1–3 ರಲ್ಲಿ ಅಬ್ರಹಾಮನ ಕಾಲದಲ್ಲಿ, ಶಿನಾರ್ ರಾಜ್ಯ, ಎಲ್ಲಸಾರ್ ರಾಜ್ಯ, ಏಲಾಮಿಯರ ರಾಜ್ಯ, ಇತ್ಯಾದಿ ಹೀಗೆ ಅನೇಕ ರಾಜ್ಯಗಳು ಇದ್ದವು ಆದರೆ ಈ ಯಾವ ರಾಜ್ಯವು ದೇವರು ಸ್ಥಾಪಿಸಿದ ರಾಜ್ಯವಾಗಿರಲಿಲ್ಲ ಆದುದರಿಂದ ದೇವರು ಇಸ್ರಾಯೇಲ್ಯರನ್ನು ತನ್ನ ಜನವನ್ನಾಗಿ ಆರಿಸಿ ಅವರನ್ನು ಐಗುಪ್ತದೇಶದಿಂದ ಬಿಡಿಸಿ ಅವರನ್ನು ಒಂದು ರಾಜ್ಯವಾಗಿ ಸ್ಥಾಪಿಸಿದನು ದೇವರು ಇಸ್ರಾಯೇಲ್ಯರ ಮೇಲೆ ಆನೇಕ ರಾಜರನ್ನು ನೇಮಿಸಿದನು, ಸಾಲ, ದಾವಿದ, ದಾವಿದನ ಮಗನಾದ ಸಲಮೋನ, ದೇವರು ಸಲಮೋನನನ್ನು ರಾಜನಾಗಿ ನೇಮಿಸುವಾಗ ಆತನ ಪಟ್ಟಾಭಿಷೇಕವಾಗುವಾಗ ಆತನು ದಾವಿದನ (1ಪೂರ್ವ29:23) ಸಿಂಹಾಸನದಲ್ಲಿ ಕೂತನು ಎಂಬುದಾಗಿ ಓದುತ್ತೇವೆ ಅಂದರೆ ದೇವರೇ ಈ ರಾಜ್ಯವನ್ನು ಮತ್ತು ರಾಜರನ್ನು ನಡೆಸುತ್ತಿದ್ದನ್ನು ಇನ್ನು ಸರಳವಾಗಿ ಹೇಳುವುದಾದರೆ ದೇವರ ಪರವಾಗಿ ಈ ರಾಜರು ತಮಗೆ ಕೊಟ್ಟ ರಾಜ್ಯವನ್ನು ಆಳ್ವಿಕೆ ಮಾಡಿದರು ದೇವರು ಮೊದಲು ಆದಾಮನಿಗೆ ಏದೇನ್ ತೋಟದಲ್ಲಿ ನೀಡಿದ ದೇವರ ಮಾದರಿ ರಾಜ್ಯವನ್ನು ಕಳೆದುಕೊಂಡ ನಂತರ ಅದೇ ರೀತಿಯಾದ ಒಂದು ಮಾದರಿ ರಾಜ್ಯವನ್ನು ದೇವರು ಇಸ್ರಾಯೇಲ್ಯರಲ್ಲಿ ಸ್ಥಾಪಿಸಿದನು. ಇಸ್ರಾಯೇಲಿನಲ್ಲಿ ಅನೇಕ ರಾಜರು ಆಳ್ವಿಕೆ ಮಾಡಿದರು ಸುಮಾರು 21 ರಾಜರು ಇಸ್ರಾಯೇಲ್ ದೇಶವನ್ನು ಆಳ್ವಿಕೆ ಮಾಡಿದರು ಈ ಇಸ್ರಾಯೇಲ್ ದೇಶದ ಕೊನೆಯ ರಾಜನಾದ ಚಿದಕೀಯನು ದೇವರಿಗೆ ವಿರುದ್ದವಾಗಿ ಅನೇಕ ಪಾಪಗಳನ್ನು ಮಾಡಿದಾಗ ದೇವರು ಆ ರಾಜನಿಗೆ ಪ್ರವಾದಿಯಾದ ಯೆಹೆಜ್ಕೇಲ 21:25–27 **"**ನಾನು ದೊಬ್ಬಿ ಬಿಡುವೆನೆ; ರಾಜ್ಯಕ್ಕೆ ಭಾಧ್ಯಸ್ತನು ಬರುವುದರೊಳಗೆ ಮುಂಚೆ ಇದ್ದಂತೆ ಇರದು**"**.

ಹೀಗೆ ದೇವರು ಇಸ್ರಾಯೇಲ್ ದೇಶವನ್ನು ತನ್ನ ರಾಜ್ಯವೆಂದು ಇನ್ನು ಮುಂದೆ ಎಣಿಸುವುದಿಲ್ಲ ಮತ್ತು ತನ್ನ ರಾಜ್ಯವನ್ನು ಇನ್ನು ಮುಂದೆ ಇಸ್ರಾಯೇಲ್ ದೇಶದಲ್ಲಿ ಮುಂದುವರಿಸುವುದಿಲ್ಲ ಎಂದು ಎಚ್ಚರಿಸಿದನ್ನು. ನಾವು ಇಲ್ಲಿ ನೋಡುತ್ತೇವೆ ಮತ್ತು ದೇವರ ರಾಜ್ಯದ ಬಾಧ್ಯಸ್ತನು ಬರುವ ತನಕ ಅಂದರೆ. ಯೇಸುಕ್ರಿಸ್ತನು ದೇವರ ರಾಜ್ಯದ ಭಾದ್ಯಾಸ್ಥನಾಗಿ ಬರುವ ತನಕ ದೇವರ ರಾಜ್ಯವು ಈ ಭೂಲೋಕದಲ್ಲಿ ಇರುವುದಿಲ್ಲ ಎಂದು ಹೇಳಿಸಿರುವುದನ್ನು ಇಲ್ಲಿ ನೋಡುತ್ತೆವೆ. ಹಾಗೆಯೇ ಈ ವಚನದಲ್ಲಿ ದೇವರು ಯಾವಾಗ ತನ್ನ ರಾಜ್ಯವನ್ನು

ಭೂಲೋಕದಲ್ಲಿ ಸ್ಥಾಪಿಸುತ್ತಾರೆ ಎಂಬುದನ್ನು ವಚನವು ಸ್ಪಷ್ಟವಾಗಿ ತಿಳಿಸಿದೆ. ಹಾಗಿದ್ದರೆ ಯೇಸು ಸ್ವಾಮಿಯ ಮೊದಲನೆಯ ಬರುವಿಕೆಯಲ್ಲಿ ಆತನು ರಾಜನಾಗಿ ಬಂದನು ಎಂದು ನೋಡಿದರೆ ಖಚಿತವಾಗಿಯೂ ಇಲ್ಲ. ಆತನು ಭೂಲೋಕದಲ್ಲಿ ಯಾವ ರಾಜನಾಗಿಯೂ ಬರಲಿಲ್ಲ ಒಂದು ವೇಳೆ ರಾಜನಾಗಿ ಬಂದಿದ್ದರೆ ಪಿಲಾತನು ನೀನು ಅರಸನು ಹೌದೂ! ಎಂದು ಕೇಳುವಾಗ ನಾನೇ ಅರಸನು ಎಂದು ಉತ್ತರ ನೀಡಿರುತ್ತಿದ್ದರು ಅದರ ಬದಲಿಗೆ ಯೇಸು ಅವನಿಗೆ ಈರಾಜ್ಯವು ನನ್ನದಲ್ಲ ಎಂದು ಉತ್ತರಿಸುವುದನ್ನು ನೋಡುತ್ತೇವೆ. ಹಾಗಿದ್ದರೆ ಯೇಸುಸ್ವಾಮಿಯ ಯಾವಾಗ ಈ ಭೂಲೋಕಕ್ಕೆ ರಾಜನಾಗಿ ಬರುತ್ತಾನೆ ಎಂದು ನೊಡುವುದಾದರೆ ಆತನ ಎರಡನೆ ಬರುವಿಕೆಯಲ್ಲಿ ಆತನು ರಾಜನಾಗಿ ಬರುತ್ತಾನೆ ಎಂದು ಸತ್ಯವೇದವು ನಮಗೆ ತಿಳಿಸಿಕೊಡುತ್ತದೆ. ಹೀಗೆ ದೇವರ ರಾಜ್ಯವಾಗಿದ್ದ ಇಸ್ರಾಯೇಲ್ ರಾಜ್ಯವನ್ನು ನಿರಾಕರಿಸಿ ಬಿಟ್ಟರು ಇದಾದ ನಂತರ ಭೂಲೋಕದಲ್ಲಿ ಅನೇಕ ರಾಜ್ಯಗಳು ಬಂದವು ಉದಾ: ಅಸಿರಿಯ, ಐಗುಪ್ತ ಇತ್ಯಾದಿ ಅದರೆ ಈ ಯಾವ ರಾಜ್ಯವು ದೇವರ ರಾಜ್ಯವಾಗಿರಲಿಲ್ಲ.

ದೇವರು ಮಹಾಕರುಣೆಯುಳ್ಳ ದೇವರಾಗಿರುವುದರಿಂಧ ಆತನು ತನ್ನ ಜನರು ಕತ್ತಲೆಯಲ್ಲಿ ಇರಬಾರದೆಂದು ನೆನಸಿ ಅವರಿಗೆ ತನ್ನ ರಾಜ್ಯವು ಪುನಃಭೂಲೋಕದಲ್ಲಿ ಯಾವಾಗ ಸ್ಥಾಪನೆಯಾಗುತ್ತದೆ. ಎಂದು ತಿಳಿಸಿಕೊಟ್ಟಿದ್ದಾರೆ. ಕ್ರಿಸ್ತನ ಎರಡನೆ ಬರುವಿಕೆ ಭೂಲೋಕದಲಿ ಯಾವಾಗ ನಡೆಯುತ್ತದೆ ಮತ್ತು ಆತನು ಯಾವಾಗ ರಾಜ್ಯ ಸ್ಥಾಪನೆ ಮಾಡುತ್ತಾನೆಂಬ ವಿಷಯದ ಕುರಿತು ದೇವರು ಈಗಾಗಲೆ ಅಂದರೆ ಯೇಸುಕ್ರಿಸ್ತನ 'ಮೊದಲನೇ ಬರುವಿಕೆಯ 2000 ವರ್ಷಗಳ ಮುಂಚೆಯೇ ಇದನ್ನು ತನ್ನ ಪ್ರವಾದಿಗಳ ಮುಖಾಂತರ ತಿಳಿಸಿಕೊಟ್ಟಿದ್ದಾರೆ. ನಾವು ಪ್ರತಿ ದಿನ ಪತ್ರಿಕೆಗಳಲ್ಲಿ ಓದುವ ಮುಖ್ಯಾಂಶಗಳನ್ನು ನಮಗೆ ದೇವರು ನಾಲ್ಕು ಸಾವಿರ ವರ್ಷಗಳ ಮುಂಚಿತವಾಗಿಯೇ ಸತ್ಯವೇದದಲ್ಲಿ ಬರೆಸಿಕೊಟ್ಟಿದ್ದಾರೆ ಉದಾ: ಮೂರನೇ ಮಹಾಯುದ್ದ. ಹೀಗೆ ಭವಿಷತ್ ಕಾಲದಲ್ಲಿ ಸಂಭವಿಸುವ ವಿಷಯವನ್ನು ನಮಗೆ ಒಬ್ಬ ರಾಜನಿಗೆ ಬಿದ್ದ ಕನಸಿನಲ್ಲಿ ತಿಳಿಸಿಕೊಟ್ಟಿದ್ದಾರೆ.

ದಾನಿಯೇಲ 2ನೇ ಅಧ್ಯಯದಲ್ಲಿ ಓದುವಂತೆ ಪ್ರವಾದಿಯಾದ ದಾನಿಯೇಲನ ಕಾಲದಲ್ಲಿ ಬ್ಯಾಬಿಲೋನ್ ದೇಶದ ಅರಸನಾಗಿದ್ದ ನೆಬೂಕದ್ನೆಚ್ಚರ ತನ್ನ ನಂತರ ಯಾವ ಅರಸನು ಆಳ್ವಿಕೆ ಮಾಡುವನು ಎಂದು ಬಹಳ ಚಿಂತಿತನಾಗಿ ನಿದ್ರಿಸುತ್ತಿರುವಾಗ ಆತನಿಗೆ ಕನಸು ಬಿತ್ತು, ಆ ಕನಸಿನಲ್ಲಿ ಒಂದು ಅದ್ಭುತ ಪ್ರತಿಮೆಯನ್ನು ಕಂಡನು ಈಪ್ರತಿಮೆಯು ಬಹಳ ವಿಚಿತ್ರವಾಗಿ ರಚಿತವಾಗಿತ್ತು ಪ್ರತಿಮೆಯ ತಲೆಯು ಚಿನ್ನದಿಂದ ಮಾಡಲ್ಪಟಿತ್ತು ಮತ್ತು ಅದರ ಎದೆಯು ತೋಳುಗಳು ಬೆಳ್ಳಿ. ಹಾಗ ರಾಜನಾದ ನಬೂಕುದ್ನೆಚ್ಚರನ್ನು ಬಹಳ ಭಯ ಹಿಡಿದವನಾಗಿ ನಿದ್ರೆ ಮಾಡಲಾಗದೆ ಉದಯವಾಗುತ್ತಲೆ ತನ್ನ ದೇಶದ ಎಲ್ಲಾ ಮಂತ್ರಿಗಳನ್ನು ಪಂಡಿತರನ್ನು ಜೋಯಿಸರನ್ನು ಕರೆಕಳುಹಿಸಿ ಅವರಿಗೆ ಆತನು ಕಂಡ ಕನಸಿನ ಅರ್ಥವನ್ನು ತಿಳಿಸಲು ಹೇಳುತ್ತಾನೆ. ಆದರೆ ರಾಜನಾದ ನೆಬೂಕೂದ್ನೆಚ್ಚರನ್ನು ತಾನು ಕಂಡ ಆ ಕನಸನ್ನು ಮರೆತು ಹೋಗಿದ್ದನು. ಅವನು ಅವರಿಗೆ ಅವನು ಕಂಡ ಕನಸ್ಸನ್ನು ಅದರ ಅರ್ಥವನ್ನು ತಿಳಿಸಬೇಕು ಇಲ್ಲದಿದ್ದರೆ ಆ ಪಂಡಿತರು, ಮಂತ್ರವಾದಿಗಳು ಜೋಯಿಸರನ್ನು ಕೊಲ್ಲುವುದಾಗಿ ಹೇಳಿದನು ಯಾರೋಬ್ಬರು ಕನಸ್ಸನ್ನು ಹೇಳಲಾಗಲಿಲ್ಲ ಹಾಗೆ ಅವರೆಲ್ಲರನ್ನು ಸಾಯಿಸಲು ಅಪ್ಪಣೆ ಮಾಡಿದನು ಈ ಸಂದರ್ಭದಲ್ಲಿಯೇ ಅರಸನ ಸೇವಕರು ದಾನಿಯೇಲನನ್ನು ಮತ್ತು ಅವನ ಸ್ನೇಹಿತರನ್ನು ಕೊಲ್ಲುವುದಕ್ಕಾಗಿ ಕರೆತರಲು ಬಂದಾಗ ದಾನಿಯೇಲ ಅವರಿಂದ ಅರಸನ ಆಸ್ಥಾನದಲ್ಲಿ ನಡೆದ ಎಲ್ಲಾ ಸಂಗತಿಯನ್ನು ಅವರಿಂದ ತಿಳಿದುಕೊಂಡು ಅವರಿಗೆ ಸ್ವಲ್ಪ ಸಮಯ ನೀಡುವುದಾದರೆ ರಾಜನಿಗೆ ಕನಸ್ಸನ್ನು ಅದರ ಅರ್ಥವನ್ನು ತಿಳಿಸುವುದಾಗಿ ಹೇಳಿದನು. ರಾಜನು ಅವರಿಗೆ ಸಮಯ ನೀಡಲು ಅದೇ ದಿನದ ರಾತ್ರಿ ದಾನಿಯೇಲನು ಮತ್ತು ಅವನ ಸ್ನೇಹಿತರು ದೇವರಿಗೆ ಪ್ರಾರ್ಥಿಸಲು ದೇವರು ರಾಜನು ಕಂಡ ಅದೇ ಕನಸ್ಸನ್ನು ಅದರ ಅರ್ಥವನ್ನು ದಾನಿಯೇಲನಿಗೆ ತಿಳಿಸಿದನು.

ಮಾರನೆ ದಿನ ದಾನಿಯೇಲನು ರಾಜನಿಗೆ ಕನಸ್ಸನ್ನು ಅದರ ಅರ್ಥವನ್ನು ಅವನಿಗೆ ಬಿಡಿಸಿ ಹೇಳಿದನು ದಾನಿಯೇಲನು ರಾಜನಿಗೆ ನೀನು ಬಹಳ ವಿಸ್ತಾರವಾಗಿಯು ಬಲಿಷ್ಠವಾಗಿಯು ಇರುವ ಒಂದು ರಾಜ್ಯವನ್ನು ಕಟ್ಟಿರುವೆ ಈ ನಿನ್ನ ರಾಜ್ಯ ನಿನ್ನ ನಂತರ ಯಾರಾ ಪಾಲಾಗುವುದು ಮತ್ತು ಯಾವ ಯಾವ ರಾಜ್ಯಗಳು ನಿನ್ನ ನಂತರ ಪ್ರಾಭಲ್ಯಕ್ಕೆ ಬರುವುದು ಎಂಬುದನ್ನು ದೇವರು ನಿನಗೆ ತಿಳಿಸಿದ್ದಾರೆ ಎಂದು ಹೇಳಿ ಆ ಅದ್ಭುತವಾದ ಪ್ರತಿಮೆಯ ಕನಸ್ಸನ್ನು ವಿವರಿಸಿದನು ಆ ಪ್ರತಿಮೆಯ ತಲೆ ಚಿನ್ನದಿಂದಲೂ ಎದೆ ಮತ್ತು ತೋಳು ಬೆಳ್ಳಿಯಿಂದಲೂ ಹೊಟ್ಟೆ ತೊಡೆ ಸೊಂಟವು ತಾಮ್ರದಿಂದಲೂ ಕಾಲುಗಳು ಕಬ್ಬಿಣದಿಂದಲೂ ಕಾಲು ಬೆರಳು ಕಬ್ಬಿಣ ಮಿಶ್ರಿತ ಜೇಡಿಮಣ್ಣಿನಿಂದ ಮಾಡಿರುವ ಪ್ರತಿಮೆಯನು ನಿನು ನೋಡುತ್ತಿರುವಲ್ಲಿ ಯಾರ ಕೈಯಿಂದಲೂ ಕೆತ್ತಲ್ಪಡದ ಒಂದು ಗುಂಡು ಬಂಡೆಯ ಬಂದು ಪ್ರತಿಮೆಯ ಕಾಲನ್ನು ಬಡಿಯಲು ಆಪ್ರತಿಮೆಯನು ಹೊಟ್ಟಿನಂತೆ ಪುಡಿ ಪುಡಿ ಮಾಡಿತು ಮತ್ತು ಗಾಳಿಯು ಬಂದು ಆ ಹೊಟ್ಟನ್ನು ಚದುರಿಸಿ ಆ ಜಾಗದಲ್ಲಿ ಪ್ರತಿಮೆಯ ಗುರುತು ಇಲ್ಲದಂತೆ ಮಾಡಿತು ಮತ್ತು ಆ ಬಂಡೆಯು ಬೆಳೆದು ಪರ್ವತವಾಗಿ ಭೂಲೋಕದಲ್ಲೆಲ್ಲಾ ಹಬ್ಬಿತು ಎಂದು ರಾಜನಿಗೆ ದಾನಿಯೇಲನು ಕನಸ್ಸನ್ನು ತಿಳಿಸಿದಾಗ ರಾಜನಿಗೆ ಅತ್ಯಶ್ಚರ್ಯವಾಯಿತು. ನಾನು ಕಂಡ ಕನಸ್ಸನ್ನು ತಾನೇ ಕಂಡವನಂತೆ ಹೇಳಿದನಲ್ಲ ಎಂದು ಆಶ್ಚರ್ಯಪಟ್ಟನು, ಮತ್ತು ಈ ಕನಸ್ಸಿನ ಅರ್ಥವನ್ನು ಸಮರ್ಥವಾಗಿ ಇವನೇ ನನಗೆ ತಿಳಿಸಬಲ್ಲನು ಎಂದು ಅರ್ಥಮಾಡಿಕೊಂಡನು ದಾನಿಯೇಲನು ಆ ಕನಸಿನ ಅರ್ಥವನ್ನು ರಾಜನಿಗೆ ತಿಳಿಸಿದನು ದಾನಿ:2:37–38.ನೇ ವಚನದಲ್ಲಿ ತಿಳಿಸಿರುವಂತೆ ಪರಲೋಕದ ದೇವರು ನಿನಗೆ ರಾಜ್ಯ ಬಲಪರಾಕ್ರಮ ವೈಭವಗಳನ್ನು ದಯಪಾಲಿಸಿದ್ದಾನೆ. ನರಜಾತಿಯವರು ವಾಸಿಸುವ ಸಕಲ ಪ್ರಾಂತಗಳಲ್ಲಿ ಆಕಾಶ ಪಕ್ಷಿಗಳನ್ನು ಭೂಜಂತುಗಳನ್ನೂ ನಿನ್ನ ಕೈಗೆ ಒಪ್ಪಿಸಿ ನೀನು ಅವುಗಳನ್ನೆಲ್ಲಾ ಆಳುವಂತೆ ಮಾಡಿದ್ದಾನೆ, ಎಂದು

ಹೇಳಿದನ್ನು. ಇದೇ ರೀತಿಯಾದ ಒಂದು ಆಶೀರ್ವಾದವನ್ನು ದೇವರು ಮೊದಲನೆಯ ರಾಜನಾದ ಆದಾಮನಿಗೆ ನೀಡಿದ್ದರು ಎಂಬುದನ್ನು ನಾವಿಲ್ಲಿ ಸ್ಮರಿಸಬಹುದು.

ಹೀಗೆ ದಾನಿಯೇಲನು ಆ ಪ್ರತಿಮೆಯ ಬಂಗಾರದ ತಲೆ ನೀನೆ ಎಂದು ನೆಬೂಕದ್ನೆಚ್ಚರನಿಗೆ ತಿಳಿಸಿದನು. ದೇವರು ಇಲ್ಲಿ ಯಾವುದೊ ಚಿಕ್ಕ ರಾಜ್ಯಗಳ ಕುರಿತಾಗಿ ಬರೆದಿಲ್ಲ ಬದಲಿಗೆ ಪ್ರಪಂಚದಲ್ಲಿ ಇರುವ ಸಾರ್ವಭೌಮ ಸಾಮ್ರಜ್ಯಗಳ ಬಗ್ಗೆ ಹೇಳಿದ್ದಾರೆ. ಬಂಗಾರದ ತಲೆ: ಬಾಬಿಲೋನ್ ರಾಜ್ಯವನ್ನು ಮತ್ತು ಆ ರಾಜ್ಯದ ಅರಸನಾದ ನೆಬೂಕದ್ನೆಚ್ಚರನಿಗೆ ಹೊಲಿಕೆಯಾಗಿದೆ. ಈ ಬಾಬಿಲೋನ್ ರಾಜ್ಯವಾದ ನಂತರ ಆ ರಾಜ್ಯಕ್ಕಿಂತ ಕನಿಷ್ಠವಾದ ಮತ್ತೊಂದು ರಾಜ್ಯವುಂಟಾಗುವುದು ಅದು ಬೆಳ್ಳಿ. ಆನಂತರ ಮೂರನೆ ರಾಜ್ಯವು ತಾಮ್ರದ್ದಾಗಿ ತಲೆದೋರಿ ಭೂಮಂಡಲವನ್ನೆಲ್ಲಾ ಆಳುವದು. ನಾಲ್ಕನೇ ರಾಜ್ಯವು ಕಬ್ಬಿಣದಷ್ಟು ಗಟ್ಟಿ ಅದು ಸಕಲವನ್ನು ಚೂರು ಚೂರಾಗಿ ಒಡೆದು ಹಾಕುತ್ತದೆ. ಐದನೇ ರಾಜ್ಯವು ಕಬ್ಬಿಣ್ಣದ ಬಲ ಮತ್ತು ಮಣ್ಣಿನಂತೆ ಬಲಹೀನವಾಗಿಯೂ ಇರುವವು. ಈರಾಜ್ಯಗಳು ಗುಂಡು ಬಂಡೆ ಬರುವವರೆಗೆ ಇರುವವು 2:44 ವಚನ ಈ ರಾಜ್ಯಗಳ ಕಾಲದಲ್ಲಿ ಪರಲೋಕ ದೇವರು ಬಂದು ರಾಜ್ಯವನ್ನು ಸ್ಥಾಪಿಸುವನು ಎಂಬುದಾಗಿ ತಿಳಿಸಿದನು.

ದಾನಿ 2:45. ಒಂದು ಗುಂಡು ಬಂಡೆಯು ಕೈಯಿಲ್ಲದೆ ಒಡೆಯಲ್ಪಟ್ಟು ಕಬ್ಬಿಣ, ತಾಮ್ರ ಮಣ್ಣು ಬೆಳ್ಳಿ ಬಂಗಾರಗಳನ್ನು ಚೂರು ಚೂರು ಮಾಡಿದ್ದು ನಿನ್ನ ಕಣ್ಣಿಗೆ ಬಿತ್ತಲ್ಲಾ ಪರಲೋಕ ದೇವರು ಮುಂದೆ ನಡೆಯುವ ವಿಷಯಗಳನ್ನು ರಾಜನಿಗೆ ತಿಳಿಯಪಡಿಸಿದ್ದಾನೆ ಕನಸು ನಿಜ ಅದರ ಅರ್ಥವು ನಂಬತಕ್ಕದ್ದು ಎಂದು ಹೇಳಿದನು. ರಾಜನು ಬಹಳ ಸಂತೋಷಪಟ್ಟು ದಾನಿಯೇಲನಿಗೆ ಅಡ್ಡ ಬಿದ್ದು ನಿಮ್ಮ ದೇವರು ದೇವಾದಿ ದೇವನೂ ರಾಜರ ಒಡೆಯನೂ ರಹಸ್ಯಗಳನ್ನು ವ್ಯಕ್ತಗೊಳಿಸುವವನೂ ಆಗಿದ್ದಾನೆಂಬುದು ನಿಶ್ಚಯ ಎಂದು ಹೇಳುವುದನ್ನು 47ನೇ ವಚನದಲ್ಲಿ ಓದುತ್ತೇವೆ.

ಈ ಮಹಾ ರಾಜ್ಯಗಳು ಯಾವವು? ಇದನ್ನು ನಾವು ಹೇಗೆ ತಿಳಿದುಕೊಳ್ಳುವುದು! ದಾನಿಯೇಲ 2:39ನೇ ವಚನದ ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಈ ವಚನದ ಪ್ರಕಾರ ಆ ಬಂಗಾರದ ತಲೆ, ನೆಬೂಕದ್ನೆಚ್ಚರ ರಾಜ ಇವನು ಬ್ಯಾಬಿಲೋನ್ ದೇಶದ ರಾಜ, ಹಾಗಾದರೆ ಮೊದಲನೆ ರಾಜ್ಯ ಬ್ಯಾಬಿಲೋನ್ ರಾಜ್ಯ ಎಂಬುದು ನಮಗೆ ಸ್ಪಷ್ಟವಾಗಿ ತಿಳಿಯುತ್ತದೆ. ಈ ಮೊದಲನೆಯ ರಾಜ್ಯವಾದ ಬ್ಯಾಬಿಲೋನ್ ರಾಜ್ಯವು ಕ್ರಿ . ಪೂ. 606 ರಿಂದ ಕ್ರಿ . ಪೂ. 538 ರವರೆಗೆ ಭೂಲೋಕದಲ್ಲಿ ಒಂದು ಪ್ರಬಲವಾದ ರಾಜ್ಯವಾಗಿ ಆಳ್ವಿಕೆ ಮಾಡಿತ್ತು.

ಇದಾದ ನಂತರ ಬಂದ ಎರಡನೆಯ ರಾಜ್ಯ ಯಾವುದೆಂಥರೆ ಮೇದೊಪರ್ಶಿಯಾ ರಾಜ್ಯ ಇದರ ಕುರಿತಾಗಿ ಸತ್ಯವೇದದಲ್ಲಿ ದಾನಿಯೇಲ 4,5 ಮತ್ತು 6 ನೇ ಅಧ್ಯಾಯದಲ್ಲಿ ಓದುತ್ತೇವೆ. ಇವರು ಕ್ರಿ . ಪೂ. 538ರಿಂದ ಕ್ರಿ . ಪೂ. 331 ರವರೆಗೆ ಭೂಲೋಕದಲ್ಲಿ ಮೇದ್ಯರು ಮತ್ತು ಪಾರಸಿಯರು ಒಟ್ಟಿಗೆ ಆಳ್ವಿಕೆ ಮಾಡಿದರು. ಈ ರಾಜ್ಯವಾದ ನಂತರ ಬಂದ ಬಲಿಷ್ಠವಾದ ರಾಜ್ಯ ಅದು ಗ್ರೀಸ್ (ಗ್ರೀಕ್) ರಾಜ್ಯ ಇವರು ಕ್ರಿ . ಪೂ. 331 ರಿಂದ ಕ್ರಿ . ಪೂ. 160 ರವರೆಗೆ ಆಳ್ವಿಕೆ ಮಾಡಿದರು. ಇದನ್ನು ಆಪ್ರತಿಮೆಯ ತಾಮ್ರದ ಹೊಟ್ಟೆ ಸೊಂಟಗಳ ಭಾಗಗಳಾಗಿ ಚಿತ್ರಿಸಿದ್ದಾರೆ. ನಾಲ್ಕನೆ ರಾಜ್ಯ ಕಬ್ಬಿಣದಿಂದ ಮಾಡಲ್ಪಟ್ಟ ಕಾಲಿನ ಭಾಗವು ರೋಮ್ ರಾಜ್ಯವನ್ನು ಸೂಚಿಸುತ್ತದೆ. ಈ ರಾಜ್ಯವು ಕ್ರಿ . ಪೂ. 160 ರಿಂದ 476 ಕ್ರಿ . ಪೂ. ದೆವರೆಗೆ ಆಳ್ವಿಕೆ ಮಾಡಿದರು. ನಮಗೆ ತಿಳಿದಿರುವಂತೆ ಯೇಸುಕ್ರಿಸ್ತನ ಜನನವಾಗುವಾಗ ಭೂಲೋಕದಲ್ಲಿ ರೋಮ್ ರಾಜ್ಯ ಆಳ್ವಿಕೆ ಮಾಡುತ್ತಿತ್ತು. ಗ್ರೀಕ್ ರಾಜ್ಯವು ಕೂಡ ಆಳ್ವಿಕೆ ಮಾಡುತ್ತಿತ್ತು ಇದರ ಬಗ್ಗೆ ನಾವು ದಾನಿಯೇಲ 8 ಮತ್ತು 11ನೇ ಅಧ್ಯಯದಲ್ಲಿ ಸಹ ನೋಡುತ್ತೇವೆ. ಯೇಸುಸ್ವಾಮಿಯು ಹೇಳುವ ಒಂದು ಮಾತು "ಒಬ್ಬ ವ್ಯಕ್ತಿಯು ಲೋಕವನ್ನೆಲ್ಲ ಜಯಿಸಿದರು ಅವನ ಆತ್ಮವನ್ನು ಕಾಪಾಡಿಕೊಳ್ಳದಿದ್ದರೆ ಅದು ಅವನಿಗೆ ವ್ಯರ್ಥ", ಎಂದು ಯಾರ ಕುರಿತಾಗಿ ಮಾತಾಡಿದ್ದಾರೆ ಎಂದರೆ ಇದೇ ಗ್ರೀಕ್ ರಾಜ್ಯದ ಸಾಮ್ರಾಟನಾಗಿದ್ದ ಅಲೆಕ್ಸಾಂಡರ್ ಕುರಿತಾಗಿ ಹೇಳಿದ ಮಾತು ಯಾಕೆಂದರೆ ಅಲೆಕ್ಸಾಂಡರನು ಕೇವಲ 23 ವಯಸ್ಸಿನಲ್ಲಿಯೇ ಪ್ರಪಂಚದ ಸಾಮ್ರಾಟನಾಗಿದ್ದನು ಅವನು 32ನೇ ವಯಸ್ಸಿನಲ್ಲಿಯೇ ಗುಣವಾಗದ ಭೀಕರ ಕಾಯಿಲೆಗೆ ತುತ್ತಾಗಿ ಅಸುನೀಗಿದನು ಇವನು ತನ್ನ ಅಂತ್ಯಕ್ರಿಯೇ ನಡೆಯುವಾಗ ತನ್ನ ಎರಡು ಕೈಗಳನ್ನು ಶವಪೆಟ್ಟಿಗೆಯ ಹೊರಗೆ ಹಾಕಿ ಸಮಾದಿ ಮಾಡಬೇಕೆಂದು ಕೇಳಿಕೋಂಡಿದ್ದನು. ಈ ಮೂಲಕವಾಗಿ ಜನರಿಗೆ ನಾವು ಲೋಕಕ್ಕೆ ಬರುವಾಗ ಏನನ್ನು ತಕ್ಕೊಂಡು ಬರುವುದಿಲ್ಲ ಅಂತೆಯೇ ಈ ಲೋಕವನ್ನು ಬಿಡುವಾಗ ಏನನ್ನು ತಕ್ಕೊಂಡು ಹೋಗುವುದಿಲ್ಲ ಎಂಬುದು ತಿಳಿಯಲಿ ಎಂದು ಹೀಗೆ ಮಾಡಬೇಕೆಂದು ಕೇಳಿಕೊಂಡಿದ್ದನಂತೆ. ಈ ರಾಜನ ಕುರಿತಾಗಿಯೂ ಯೇಸುವು ಹೇಳಿದನೆಂಬುದು ನಮಗೆ ಇದರಿಂದ ಗೊತ್ತಾಗುತ್ತದೆ.

ಈ ಪ್ರತಿಮೆಯನ್ನು ಗಮನಿಸುವುದಾದರೆ ಇದರಲ್ಲಿ ಒಂದು ವಿಶೇಷತೆ ಇದೆ, ಅದೇನೆಂದರೆ ಈ ಪ್ರತಿಮೆಯಲ್ಲಿರುವ ಲೋಹಗಳು ಕ್ರಮವಾಗಿ ಇಳಿಮುಖವಾಗಿರುವುದನ್ನು ಗಮನಿಸುತ್ತೇವೆ. ಅಂದರೆ ಮೊದಲು ಚಿನ್ನ ನಂತರ ಚಿನ್ನಕ್ಕಿಂತ ಕಡಿಮೆ ಬೆಲೆಯ ಬೆಳ್ಳಿ ಬೆಳ್ಳಿಗಿಂತ ಕಡಿಮೆಯಾಗಿರುವ ಲೋಹ ತಾಮ್ರ ಅದಕ್ಕಿಂತಲೂ ಕಡಿಮೆ ಬೆಲೆಯ ಲೋಹ ಕಬ್ಬಿಣ. ಈ ಲೋಹಗಳು ಹೇಗೆ ಮಾನವನು ಕಾಲದಿಂದ ಕಾಲಕ್ಕೆ ದೇವರ ಸ್ವರೂಪವನ್ನು ಕಳೆದುಕೊಂಡು ಪಾಪದ ಸ್ಥಿತಿಗೆ ಬಿಳುತ್ತಿರುವುದನ್ನು ಸೂಚಿಸುತ್ತದೆ. ಇದೇ ಪ್ರಕಾರ ಈ ಲೋಹಗಳು ಒಂದಕ್ಕಿಂತ ಒಂದು ಬಲವಾಗಿರುವ ಮತ್ತು ಗಟ್ಟಿಯಾಗಿರುವ ಲೋಹಗಳು ಅಂದರೆ ಚಿನ್ನಕ್ಕಿಂತ, ಬೆಳ್ಳಿ ಗಟ್ಟಿ, ಬೆಳ್ಳಿಗಿಂತ ತಾಮ್ರಗಟ್ಟಿ, ತಾಮ್ರಕ್ಕಿಂತ ಕಬ್ಬಿಣ ಹೀಗೆ ಒಂದು ಲೋಹಕ್ಕಿಂತ ಇನ್ನೊಂದು ಲೋಹ ಬಲವಾಗಿರುವುದನ್ನು ನೋಡುತ್ತೇವೆ. ಅಂದರೆ ಮನುಷ್ಯನ ಮೌಲ್ಯ

ದಿನದಿಂದ ದಿನಕ್ಕೆ ಕಡಿಮೆಯಾಗುತ್ತಾ ಕೊನೆಯ ರಾಜ್ಯವಾದ ರೋಮ್ ರಾಜ್ಯದ ಕಾಲದಲ್ಲಿ ಮನುಷ್ಯರನ್ನು ಕೀಳಾಗಿ ಕೇವಲ ದಾಸರಾಗಿ ಎಣಿಸಿದರು ಮತ್ತು ಒಂದು ರಾಜ್ಯದಿಂಥ ಇನ್ನೊಂದು ರಾಜ್ಯವು ಭಯಂಕರವಾಗಿಯೂ, ಕ್ರೂರಿಗಳಾಗಿಯೂ ಬಹಳ ಕಾಠಿಣ್ಯವುಳ್ಳವರಾಗೀದ್ದರು ಇತಿಹಾಸದಲ್ಲೆ ಬಹಳ ಕ್ರೂರವಾಗಿ ಆಳ್ವಿಕೆ ಮಾಡಿದ ರಾಜ್ಯ ಯಾವುದೆಂದರೆ ಅದು ರೋಮ್ ರಾಜ್ಯ ಎಂದು ನೋಡುತ್ತೇವೆ.

ಈ ರೋಮ್ ರಾಜ್ಯದ ನಂತರ ಬಂದಂತಹ ಕೊನೆಯ ರಾಜ್ಯದ ಲಕ್ಷಣವೇನೆಂದರೆ ಅದು ಕಬ್ಬಿಣ ಮಿಶ್ರಿತ ಮಣ್ಣು ದಾನಿಯೇಲ 2:42, 43. ಈ ರಾಜ್ಯವು ಭಿನ್ನ ಭಿನ್ನವಾಗಿರುತ್ತದೆ. ಈ ರಾಜ್ಯದಲ್ಲಿ ಕಬ್ಬಿಣದಂತೆ ಬಲ ಹಾಗು ಜೇಡಿಮಣ್ಣಿನಂತೆ ಮೃದುವಾಗಿಯೂ ಇರುವುದು. ಈ ರಾಜ್ಯವು ಮನುಷ್ಯ ಸಂತತಿಯ ಕೂಡ ಸೇರುವುದು. ಕಬ್ಬಿಣಕ್ಕೆ ಸೇರಿದ ಜೇಡಿಮಣ್ಣು ಅಂದರೆ ಯಾವ ರಾಜ್ಯ? ಕಬ್ಬಿಣ ಮತ್ತು  ಜೇಡಿಮಣ್ಣು ಒಂದಕೊಂದು ಸೇರುವುದಿಲ್ಲ ಇದು ಮಾತ್ರವಲ್ಲದೆ ಜೇಡಿಮಣ್ಣು ಒಂದಕೊಂದು ಸೇರುವುದಿಲ್ಲ ಇದು ಮಾತ್ರವಲ್ಲದೆ ಜೇಡಿ ಮಣ್ಣು ಸಾಮಾನ್ಯವಾಗಿ ಕಲ್ಲಿನ ಹಾಗೆ ಕಪ್ಪಗೆ ಕಾಣುತ್ತದೆ.

ಹಾಗಿದ್ದರೆ ಸತ್ಯವೇದದಲ್ಲಿ ಕಲ್ಲನ್ನು ಯಾವುದಕ್ಕೆ ಹೋಲಿಸುತ್ತಾರೆ? 1ಪೇತ್ರ2:5 ನೀವು ಸಹ ಜೀವವುಳ್ಳ ಕಲ್ಲು ಸತ್ಯ ಸಭೆಗೆ ಹೊಲಿಸಿ ಹೇಳಲಾಗಿದೆ. ಆಗಾದರೆ ಕಲ್ಲಿನಂತೆ ಕಾಣುವ ಜೇಡಿಮಣ್ಣು ಸುಳ್ಳು ಸಭೆಗೆ ಹೋಲಿಕೆಯಾಗಿದೆ ಎಂದು ಅರ್ಥ ಮಾಡಿಕೊಳ್ಳಬಹುದು ಲೋಕದಲ್ಲಿರುವ ಕ್ರೈಸ್ತರೆಲ್ಲ ನಿಜವಾದ ಕ್ರೈಸ್ತರೇ? ಖಂಡಿತವಾಗಿಯೂ ಇಲ್ಲ ಅವರಲ್ಲಿ ಅನೇಕರು ಕೇವಲ ಹೆಸರಿನ ಕ್ರೈಸ್ತರಾಗಿದ್ದಾರೆ. ಇವರು ಹೃದಯದಲ್ಲಿ ಕ್ರೈಸ್ತರಾಗದ ಕಾರಣ ಇವರನ್ನು ಕ್ರೈಸ್ತರೆಂದು ಕರೆಯಲು ಸಾಧ್ಯವಿಲ್ಲ ರೋಮ 9:6. ಇಸ್ರಾಯೇಲರಲ್ಲಿ ಹುಟ್ಟಿದವರೆಲ್ಲ ಇಸ್ರಾಯೇಲ್ಯ ರಲ್ಲ ಕೇವಲ ಕ್ರೈಸ್ತರೆಂದು ಹೆಸರನ್ನು ಹೊಂದಿದ್ದ ಮಾತ್ರಕ್ಕೆ ಯಾರು ಕ್ರೈಸ್ತರಾಗುವುದಿಲ್ಲ ನಿಜವಾದ ಕ್ರೈಸ್ತರಿಗೆ ಕೆಲವೊಂದು ಗುಣಲಕ್ಷಣ ಮತ್ತು ಅರ್ಹತೆಗಳಿದೆ.

ಹಾಗಾದರೆ ಕಲ್ಲು ನಿಜವಾದ ಕ್ರೈಸ್ತರನ್ನು, ಮತ್ತು ಜೇಡಿಮಣ್ಣು ಸುಳ್ಳು ಕ್ರೈಸ್ತರನ್ನು ಸೂಚಿಸುತ್ತದೆ. ಈ ಸುಳ್ಳಾದ ಕ್ರೈಸ್ತರು ಕಬ್ಬಿಣದಂತಿರುವ ರೋಮ್ ರಾಜ್ಯದೊಡನೆ ಸೇರಿ ರೋಮನ್ ಕ್ಯಾಥೋಲಿಕ್ ಎಂದಾಯಿತು. ಇಲ್ಲಿ ಕ್ಯಾಥೋಲಿಕ್ ಪದದ ಅರ್ಥ ನೋಡುವುದಾದರೆ ಅದು ಸಾರ್ವತ್ರಿಕ (ಸಾರ್ವಜನಿಕ/universal) ಎಂದು ಹಿಂದಿನ ಕಾಲದಲ್ಲಿ ಸರ್ವ ಕ್ರೈಸ್ತರಿಗೂ ಒಂದೇ ದೇವಾಲಯವಿತ್ತು ಇದರಲ್ಲಿ ಪ್ರಸ್ತುತದಲ್ಲಿ ನೋಡುವಂತೆ ಬೇರೆ ಯಾವ ಪಂಗಡಗಳು ಇರಲಿಲ್ಲ. ಆದರೆ ಇದು ರೋಮ್ ರಾಜ್ಯದವರ ಜೊತೆ ಸೇರಿ ಯೇಸುಸ್ವಾಮಿ ಬರುವುದಕ್ಕೆಮುಂಚೆಯೆ ಆಳ್ವಿಕೆ ಮಾಡಲು ತೊಡಗಿದ್ದರು ಹೀಗೆ ಅ ಕಬ್ಬಿಣ ಮತ್ತು ಜೇಡಿಮಣ್ಣು ಜೊತೆಗಿದ್ದರು ಒಂದಕೊಂದು ಅಂಟಿಕೊಂಡಿರುವುದಿಲ್ಲವೂ ಅದರಂತೆಯೇ ಈ ರಾಜ್ಯದಲ್ಲಿಯೂ ಇರುವುದು ಈ ರೀತಿಯಾಗಿ ಈ ರಾಜ್ಯಗಳು ಎಲ್ಲಿಯವರೆಗೆ ಇರುತ್ತದೆಂದರೆ ಯಾರ ಕೈಯಿಂದಲೂ ಕೆತ್ತಲ್‍ಪಡದ ಗುಂಡು ಬಂಡೆಯು ಒಡೆಯುವ ತನಕ ಇದು ಈಗೆಯೇ ಇರುವದು.

ಇವತ್ತಿನವರೆಗೆ ಈ ರೋಮ್ ರಾಜ್ಯವು ಇರುವುದನ್ನು ನೋಡುತ್ತೇವೆ. ಹೀಗೆ ಆಕಾಲುಗಳಲ್ಲಿ (10) ಹತ್ತು ಬೆರಳುಗಳು ಇದ್ದವೂ ಅದರಂತೆಯೇ ರೋಮ್ ರಾಜ್ಯವು 10 ಭಾಗವಾಗಿ ವಿಂಗಡವಾಯಿತು. ಪೋಲ್ಯಾಂಡ್, ಐರ್‍ಲ್ಯಾಂಡ್, ಜರ್ಮನಿ, ಪೋರ್ಚುಗಲ್ ಇವೆಲ್ಲವು ರೋಮ್ ರಾಜ್ಯದ ಭಾಗವೆ, ಇದು ಮಾತ್ರವಲ್ಲದೆ ಯೂರೋಪ್ ಖಂಡದಲ್ಲಿರುವ ಅನೇಕ ರಾಜ್ಯಗಳು ರೋಮ್‍ನ ಭಾಗವಾಗಿದೆ. ಈದೇಶಗಳು ಈಗಲೂ ಸಹ ಇರುವುದನ್ನು ನೋಡುತ್ತೇವೆ. ಈ ಪ್ರತಿಮೆಗೆ ಗುಂಡು ಬಂಡೆ ಬಂದು ಒಡೆಯುವುದು ಎಂದರೇನು? ಯಾರಿಂದಲು ಕೆತ್ತಲ್ಪಡದ ಗುಂಡು ಬಂಡೆ ಎಂದರೆ ಇದು ಸತ್ಯ ಸಭೆಗೆ ಹೊಲಿಕೆಯಾಗಿದೆ. ದೇವರು ಈ ಸತ್ಯ ಸಭೆಯನ್ನು ಲೋಕದ ರಾಜ್ಯದೊಳಗಿಂದ ಆರಿಸಿಕೊಳ್ಳುತ್ತಿದ್ದಾರೆ. ಇವರು ಮನುಷ್ಯರ ಕೈಯಿಂದಾಗಲಿ ಅವರ ಶಕ್ತಿ ಸಾಮರ್ಥ್ಯದಿಂದಾಗಲಿ ಆರಿಸಲ್ಪಡದೆ ದೇವರ ಪವಿತ್ರಾತ್ಮನ ಬಲದಿಂದ ಈ ಸಭೆಯನ್ನು ಆರಿಸಿಕೊಳ್ಳುತ್ತಿದ್ದಾರೆ. ಆರಿಸಲ್ಪಟ್ಟ ಈ ಸಭೆಯು ಕ್ರಿಸ್ತನ ಎರಡನೆಯ ಬರುವಿಕೆಯಲ್ಲಿ ಆತನ ಕೂಡ ಸೇರಿ ಲೋಕದ ರಾಜ್ಯಗಳನ್ನು ಇಲ್ಲದಂತೆ ನಾಶ ಮಾಡಿ ತನ್ನ ಮಹಿಮೆಯುಳ್ಳ ರಾಜ್ಯವನ್ನು ಸ್ಥಾಪಿಸುವುದನ್ನು ಸೂಚಿಸುತ್ತದೆ. ಪ್ರಸ್ತುತದಲ್ಲಿ ಈ ಎಲ್ಲಾ ಕಾರ್ಯಗಳು ನಡೆಯುತ್ತಿರುವುದನ್ನು ನಾವು ನೋಡುತ್ತೇವೆ. ಈಗಾಗಲೆ ಕ್ರಿಸ್ತನ ಎರಡನೆ ಬರುವಿಕೆಯ ಪ್ರಾರಂಭವಾಗಿ ಲೋಕದಲ್ಲಿರುವ ಎಲ್ಲಾ ರಾಜ್ಯಗಳ ಬಲವನ್ನು ಒಡೆದು ಆ ರಾಜ್ಯಗಳ ಪ್ರಾಬಲ್ಯವು ಕಡಿಮೆಯಾಗುತ್ತಿರುವುದನ್ನು ನೋಡುತ್ತಿದ್ದೇವೆ.

ಕೀರ್ತನೆ 110:5,6 ಕ್ರಿಸ್ತನು ತನ್ನ ಎರಡನೆ ಬರುವಿಕೆಯಲ್ಲಿ ಈ ಕಾರ್ಯಗಳನ್ನು ಮಾಡುವನು ಆತನು ರಾಜ್ಯಗಳನ್ನು ತನ್ನ ಕೊಪದ ದಿನಗಳಲ್ಲಿ ಖಂಡಿಸುವನು. ಈತನ ದಿನಗಳಲ್ಲಿ  ಯಾವುದೇ ಒಂದು ರಾಜಕೀಯ ಪಕ್ಷವು ಅಧಿಕ ಮತವನ್ನು ಪಡೆದು ಅಧಿಕಾರಕ್ಕೆ ಬರಲು ಸಾಧ್ಯವಾಗದೆ ಇರುವುದನ್ನು ನೋಡುತ್ತೇವೆ. ಈ ಎಲ್ಲಾ ರಾಜಕೀಯ ಪಕ್ಷಗಳೂ ಸಹ ಸಮದಾನವಾಗಿರುವುದಿಲ್ಲ ಮತ್ತು ಶಾಂತಿಯುತವಾದ ಆಡಳಿತವನ್ನು ನೀಡಲು ಅಸಮರ್ಥವಾಗಿರುವುದನ್ನು ನೋಡುತ್ತೇವೆ. ಇವೆಲ್ಲವುಗಳು ಮುಂದೆ ಹೇಗೆ ಪ್ರತಿಮೆಯು ಬಡಿದು ಪುಡಿ ಪುಡಿಯಾಗಿ ಬೂದಿಯಾಯಿತೋ ಅಂತೆಯೇ ಇವುಗಳು ಲೋಕದಲ್ಲಿ ಇಲ್ಲವಾಗುವವು ಗಾಳಿ ಬೀಸಲು ಬೂದಿಯೂ ಸಹ ಇಲ್ಲವಾಯಿತೆಂದು ನಾವು ಸತ್ಯವೇದದಲ್ಲಿ ಓದುತ್ತೇವೆ. ಇಲ್ಲಿ ಗಾಳಿಯು ಲೋಕಕ್ಕೆ ಬರಲಿರುವ ಉಪದ್ರವವನ್ನು ಸೂಚಿಸುತ್ತದೆ. ಉಪದ್ರವದ ಆ ಮಹಾದಿನವು ಬಂದಾಗ ಲೋಕದಲ್ಲಿರುವ ಎಲ್ಲಾ ರಾಜ್ಯವು ನೆನಪಿಗೂ ಸಹ ಸಿಗದಂತೆ ಸಂಪೂರ್ಣ ನಾಶವಾಗಿ ಹೋಗುವುದನ್ನು ಸೂಚಿಸುತ್ತದೆ. ಇದಾದ ನಂತರ ಪ್ರಾರಂಭವಾಗುವ ರಾಜ್ಯವೇ ದೇವರ ರಾಜ್ಯ ಕೀರ್ತನೆ110:5 ಶತ್ರುಗಳ ಶಿರಸ್ಸನ್ನು ಛೇದಿಸಿ, ನ್ಯಾಯವನ್ನು

ನಡೆಸದ ಯಾರನ್ನು ಉಳಿಸರು ಈತನ ರಾಜ್ಯದ ಆಡಳಿತಾಧಿಕಾರಿಗಳೂ ನ್ಯಾಯವನ್ನು ಜನರಿಗೆ ಮಾಡದೆ ಹೋದರೆ ಅವರನ್ನು ಒಡೆದು ಉರುಳಿಸಿ ಬಿಡುವನು.

ಇದಾದ ನಂತರ ಎಂದಿಗೂ ನಾಶವಾಗದ ಸಮಧಾನದ ರಾಜ್ಯವನ್ನು ಸ್ಥಾಪಿಸುವವರು ಇದೇ ಐದನೇ ಸಾಮ್ರಾಜ್ಯ ಈ ಸಾಮ್ರಾಜ್ಯವು ಭೂಲೋಕದಲ್ಲಿ ಸ್ಥಾಪಿಸಲ್ಪಡುವುದು ಇದನ್ನು ಯಾರು ತಡೆಯಲಾರರು. ಈ ಚಿತ್ರಣವನ್ನೆ ದೇವರು ದಾನಿಯೇಲನಿಗೆ ಮತ್ತೊಂದು ದರ್ಶನದ ಮೂಲಕವು ತಿಳಿಸಿದ್ದಾರೆ ಇದನ್ನು ನಾವು ದಾನಿಯೇಲನ ಪುಸ್ತಕದ 7ನೇ ಅಧ್ಯಾಯದಲ್ಲಿ ಓದಬಹುದು. ದಾನಿಯೇಲ 7:2 ಚತುರ್ದಿಕ್ಕಿನ ಗಾಳಿಗಳು ಮಹಾ ಸಾಗರದ ಮೇಲೆ ರಭಸವಾಗಿ ಬಿಸಿತು. ನಾಲ್ಕು ವಿಲಕ್ಷಣವಾಗಿರುವ ದೊಡ್ಡ ಮೃಗಗಳು ಸಾಗರದಿಂದ ಎದ್ದು ಬಂದವು. ಮೊದಲ ಮೃಗವು ಸಿಂಹದಂತಿತ್ತು ಅದಕ್ಕೆ ಹದ್ದಿನಂತೆ ರೆಕ್ಕೆಗಳಿದ್ದವು, ರೆಕ್ಕೆಗಳು ಕೀಳಲಲ್ಪಟ್ಟ ಮನುಷ್ಯನಂತೆ ನಿಂತುಕೊಂಡಿತ್ತು ಅದಕ್ಕೆ ಮನುಷ್ಯನಂತ ಹೃದಯವು ಕೂಡಲ್ಪಟ್ಟಿತ್ತು.

ಎರಡನೇ ಮೃಗವು ಕರಡಿಯಂತಿತ್ತು ಒಂದು ಹೆಗಲನ್ನು ಮೇಲಕ್ಕೆ ಎತ್ತಿಕೊಂಡಿತು. ಅದರ ಬಾಯಲ್ಲಿ 3 ಪಕ್ಕೆ ಎಲುಬುಗಳನ್ನು ಕಚ್ಚಿಕೊಂಡಿತ್ತು ನೀನೆದ್ದು ಬಹು ಮಾಂಸವನ್ನು ತಿನ್ನು ಎಂದು ಅದಕ್ಕೆ ಹೇಳೋಣವಾಯಿತು. ಮೂರನೇ ಮೃಗವು ಚಿರತೆಯಂತಿತ್ತು ಅದಕ್ಕೆ 4 ರೆಕ್ಕೆಗಳಿದ್ದವು, 4 ತಲೆಗಳಿದ್ದವು ದೊರೆತನವು ಕೊಡೋಣವಾಯಿತು. ನಾಲ್ಕನೆ ಮೃಗ ಭಯಂಕರವಾಗಿತ್ತು ಕಬ್ಬಿಣದ ಹಲ್ಲು 10 ಕೊಂಬುಗಳಿದ್ದವು ಇನ್ನೊಂದು ಚಿಕ್ಕ ಕೊಂಬು ಮೊಳೆಯಿತು ಇದರಿಂದ 3 ಕೊಂಬು ಕೀಳಲ್ಪಟ್ಟವು. ಈ ಕೊಂಬುಗಳ್ಳಲ್ಲಿ ಮನುಷ್ಯ ಕಣ್ಣುಗಳಂತಿರುವ ಕಣ್ಣುಗಳೂ ಬಡಾಯಿ ಕೊಚ್ಚಿಕೊಳ್ಳುವ ಬಾಯಿಯೂ ಇದ್ದವು.

ನೆಬೂಕದ್ನೆಚ್ಚರನಿಗೆ ಬಿದ್ದ ಕನಸಿಗೆ ಸಮಾನವಾದ ಈ ದರ್ಶನವು ಇದೆ ಎಂಬುದನ್ನು ನಾವು ನೋಡುತ್ತೇವೆ. ಹೀಗೆ ನಾಲ್ಕು ರಾಜ್ಯಗಳನ್ನು ಮೃಗಗಳ ರೂಪದಲ್ಲಿ ತೋರಿಸಿದ್ದಾರೆ ಚರ್ತುದಿಕ್ಕಿನಿಂದ ಗಾಳಿ ಸಮುದ್ರದ ಮೇಲೆ ಬೀಸಲು ಮೃಗಗಳು ಎದ್ದು ಬಂದವು ಸತ್ಯವೇದದಲ್ಲಿ ಸಮುದ್ರ ಎಂದರೆ ಯೆಶಾಯ 57:20 ದುಷ್ಟರಾದರೋ ಅಲ್ಲೋಲ ಕಲ್ಲೋಲವಾದ ಸಮುದ್ರದಂತಿದ್ದಾರೆ, ಅದು ಸುಮ್ಮನಿರದು ಅದರ ತೆರೆಗಳು ಕೆಸರನ್ನೂ ಬುರುದೆಯನ್ನು ಕಾರುತ್ತಲಿರುತ್ತದೆ. ದುಷ್ಟರಿಗೆ ಸಮಾಧಾನವೇ ಇಲ್ಲವೆಂದು ನನ್ನ ದೇವರು ನುಡಿಯುತ್ತಾನೆ. ದುಷ್ಟರಿಗೆ ಹೊಲಿಕೆಯಾಗಿದೆ.

ಭೂಮಿಗೆ ನಾಲ್ಲು ದಿಕ್ಕಿನಿಂದ ಗಾಳಿ ಬೀಸಲು ಅಂದರೆ ಪೂರ್ವಪಶ್ಚಿಮ ಉತ್ತರ ದಕ್ಷಿಣ ಈ ನಾಲ್ಕು ದಿಕ್ಕುಗಳಿವೆ ಆದರೆ ಇಲ್ಲಿ ಪ್ರಸ್ತಾಪಿಸುತ್ತಿರುವ ನಾಲ್ಕು ದಿಕ್ಕು ಭೂಮಿಯ ಮೇಲೆ ಪ್ರಭಾವ ಬೀರುವ ನಾಲ್ಕು ವಿಷಯಗಳಿಗೆ ಹೋಲಿಕೆಯಾಗಿದೆ. ಅದಾವುದೆಂದರೆ ರಾಜಕೀಯ ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ವಿಷಯಗಳಾಗಿದೆ. ಇದರಲ್ಲಿ ಯಾವುದೇ ಆಗಿರಲಿ ಭೂಮಿಯಲ್ಲಿ ಪ್ರಬಲವಾದ ಪರಿಣಾಮವನ್ನು ಬೀರುತ್ತದೆ. ಇಂತಹ ಪ್ರಭಾವಗಳಿಂದಲೇ ಭೂಮಿಯಲ್ಲಿ ಬದಲಾವಣೆಗಳು ಬರಲು ಸಾಧ್ಯ ಅಂದರೆ ಭೂಮಿಯ ಮೇಲಿರುವ ಜನಸಮೂಹದ ಮೇಲೆ ಈ ನಾಲ್ಕು ಪ್ರಭಾವಗಳು ಬೀಸುವಾಗ ಅವುಗಳಿಂದ ಎದ್ದು ಬಂದಿರುವ ನಾಲ್ಕು ರಾಜ್ಯಗಳನ್ನು ಸೂಚಿಸುತ್ತದೆ. ಇವು ದೇವರಿಂದ ಪರಲೋಕದಲ್ಲಿಯಾಗಲಿ, ಭೂಲೋಕದಲ್ಲಿಯಾಗಲಿ ಸ್ಥಾಪಿತವಾಗಿದೆ ಸಮಾಜಿಕ, ಆರ್ಥಿಕ ಧಾರ್ಮೀಕ, ರಾಜಕೀಯ ಕಾರಣಗಳಿಂದ ಜನರ ಮಧ್ಯದಲ್ಲಿ ಜನರಿಂದ ಸ್ಥಾಪಿತವಾದ ರಾಜ್ಯಗಳು. ಮೊದಲನೆ ಮೃಗ:– ಸಿಂಹ ಇದಕ್ಕೆ ರೆಕ್ಕೆಗಳಿದ್ದವು ಎರಡನೆ ಮೃಗ:– ಕರಡಿ ಒಂದು ಭುಜ ಮೇಲಕ್ಕೆ ಎತ್ತಿತ್ತು. ಮೂರನೆ ಮೃಗ:– ಚಿರತೆ 4ತಲೆ 4ರೆಕ್ಕೆ ನಾಲ್ಕನೆ ಮೃಗ:– ವಿಲಕ್ಷಣವಾದ ಮೃಗ 10 ಕೊಂಬು, ಕಣ್ಣು ಬಾಯಿಗಳದ್ದವು ಈ ಮೃಗಗಳು ಏನನ್ನು ಸೂಚಿಸುತ್ತದೆ? ನಾವು ದಾನಿಯೇಲ 2 ಮತ್ತು 7ಅಧ್ಯಾಯವನ್ನು ಹೋಲಿಸಿ ನೋಡಿದರೆ. ದೇವರು ಒಂದು ವಿಷಯದ ಕುರಿತಾಗಿ ಬರೆಸಿರುವುದನ್ನು ನೊಡುತ್ತೇವೆ. ದಾನಿಯೇಲ 2ನೇ ಅಧ್ಯಾಯದಲ್ಲಿ ಬರುವ ರಾಜ್ಯವನ್ನು ಅದ್ಭುತ ಪ್ರತಿಮೆಯಲ್ಲಿ ಚಿತ್ರಿಸಿದ್ದಾರೆ. ಸ್ವತಹ ಅರಸನಾದ ನೆಬೂಕದ್ನೆಚ್ಚರನೇ ಅದನ್ನು ಕಂಡು ಆಶ್ಚರ್ಯ ಪಟ್ಟನೆಂದು ಓದುತ್ತೇವೆ. ಇದರಂತೆಯೇ ಮನುಷ್ಯನ ದೃಷ್ಟಿಯಲ್ಲಿ ಮನುಷ್ಯನ ರಾಜ್ಯಗಳ ಬಹಳ ಅಮೋಘವಾಗಿಯೂ ವಿಶಿಷ್ಟವಾಗಿಯೂ ಪ್ರಸಂಶನೀಯವಾಗಿತ್ತು. ಇದೇ ಎಂಬುದನ್ನು ದೇವರು 2ನೇ ಅಧ್ಯಯದಲ್ಲಿ ತಿಳಿಸಿದ್ದಾರೆ. ಉದಾ. ಹಿಟ್ಲರ್ ಕ್ಲಿಯೋಪಾತ್ರ, ನೆಪೊಲಿಯನ್ ಸೀಸರ್, ಈ ಎಲ್ಲಾ ರಾಜನ ಆಳ್ವಿಕೆಯು ಮನನುಷ್ಯರ ದೃಷ್ಟಿಯಲ್ಲಿ ಬಹಳ ಅಮೋಘವಾಗಿದೆ. ಈ ರಾಜನ ಆಳ್ವಿಕೆಯನ್ನು ಜನರು ಹಾಡಿ ಹೊಗಳುತ್ತಾರೆ. ಇಂದಿನವರೆಗೂ ಈ ರಾಜ್ಯವನ್ನು ಆ ದೇಶದ ರಾಜರುಗಳನ್ನು ಮನುಕುಲವು ನೆನೆಯುತ್ತದೆ. ಇದನ್ನೆ ದಾನಿಯೇಲ ಅಧ್ಯಯದಲ್ಲಿ ತಿಳಿಯಪಡಿಸಿದ್ದಾನೆ. ಆದರೆ ಈ ರಾಜ್ಯಗಳು ಮತ್ತು ರಾಜರುಗಳು ದೇವರು ದೃಷ್ಟಿಯಲ್ಲಿ ಹೇಗೆ ಕಾಣಬರುತ್ತದೆ. ಎಂಬುದನ್ನು ಅದೇ ದಾನಿಯೇಲನ ಪುಸ್ತಕದ 7ನೇ ಅಧ್ಯಾಯದಲ್ಲಿ ಚಿತ್ರಿಸಿದ್ದಾರೆ. ದೇವರ ದೃಷ್ಟಿಯಲ್ಲಿ ಮನುಷ್ಯರಿಂದ ಉಂಟಾದ ಈನಾಲ್ಕು ಮಹಾ ರಾಜ್ಯಗಳು ಅಧ್ಯಯದಲ್ಲಿ ಬರುವ ದರ್ಶನಕ್ಕೂ ಇರುವ ವ್ಯತ್ಯಾಸ,

2ನೇ ಅಧ್ಯಾಯದಲ್ಲಿ ಬಂಗಾರದ ತಲೆಯನ್ನು ಬ್ಯಾಬಿಲೋನ್ ರಾಜ್ಯಕ್ಕೆ ಹೊಲಿಸಲಾಗಿದೆ ಅಂತೆಯೇ ಇದೇ ಬ್ಯಾಬಿಲೋನ್ ರಾಜ್ಯವನ್ನು ಸಿಂಹಕ್ಕೆ ಹೊಲಿಸಲಾಗಿದೆ ಹೇಗೆಂದರೆ ಸಿಂಹವು ಕಾಡಿಗೆ ರಾಜ ಅದರಂತೆ ಲೋಕದಲ್ಲಿರುವ ಎಲ್ಲಾ ಪ್ರಾಂತ್ಯದ ಮೇಲೆ ಅಧಿಕಾರವನ್ನು ಬ್ಯಾಬಿಲೋನಿನ ರಾಜನಿಗೆ ನೀಡಲಾಗಿತ್ತು. ಎರಡನೆ ರಾಜ್ಯ ಬೆಳ್ಳಿ ಎದೆ ತೋಳುಗಳು ಬೆಳ್ಳಿ ಇದನ್ನು ಮೆದೋಪರ್ಶಿಯ ರಾಜ್ಯಕ್ಕೆ ಹೋಲಿಸಲಾಗಿದೆ. ಅಂತೆಯೇ 7ನೇ ಅಧ್ಯಾಯದಲ್ಲಿ ಎರಡನೆ ರಾಜ್ಯವನ್ನು ಕರಡಿಗೆ ಹೋಲಿಸಲಾಗಿದೆ. ಈ ಕರಡಿಯಲ್ಲಿರುವ ಅರ್ಥವೇನೆಂದರೆ. ಅದು ಒಂದು ಭುಜವನ್ನು ಮೇಲಕ್ಕೆ ಎತ್ತಿಕೊಂಡಿತ್ತು ಎಂದು ಓದುತ್ತೇವೆ. ಕರಡಿಯ ಮನೋಭಾವವನ್ನು ನೋಡಿದರೆ

ಅದು ಒಮ್ಮೆ ಯಾರನ್ನಾದರೂ ಸಾಯಿಸಬೇಕು ಇಲ್ಲವೆ ಅದರ ಮೇಲೆ ಎಗರಬೇಕು ಎಂದು ನಿಶ್ಚಯಿಸಿದರೆ ಅದರ ಮನಸ್ಸನ್ನು ಬದಲಾಯಿಸುವುದು ಬಹಳ ಕಠಿಣ ಇದರಂತೆಯೆ ಮೇದ್ಯರ ಮತ್ತು ಪಾರಸಿಯರು ಒಮ್ಮೆ ರಾಜಾಜ್ಞೆಯನ್ನು ಹೊರಡಿಸಿದರೆ ಸ್ವತಹ ರಾಜನೆ ಅ ಆಜ್ಞೆಯನ್ನು ಹಿಂದೆಗೆಯುವುದಾಗಲಿ ರದ್ದು ಮಾಡುವುದಕ್ಕಾಗಲಿ ಸಾಧ್ಯವಿಲ್ಲ. ಉದಾ:– ಎಸ್ತರಳ ಕಾಲದಲ್ಲಿ ಯೆಹೋದ್ಯರನ್ನು ಸಂಹರಿಸಲು ದುಷ್ಟನಾದ ಹಾಮಾನನು ರಾಜನಿಂದ ಸಮ್ಮತಿಯನ್ನು ಪಡೆದು ಕೊಂಡದ್ದು ದಾನಿಯೇಲನನ್ನು ಸಿಂಹದ ಗವಿಗೆ ಹಾಕಿಸಿದ ಸಂದರ್ಭ, ತಾಮ್ರದ ತೊಡೆಗಳು– ಇದನ್ನು ಗ್ರಿಸ್ ದೇಶಕ್ಕೆ ಹೋಲಿಸಲಾಗಿದೆ ಇದನ್ನು 7ನೇ ಅಧ್ಯಾಯದಲ್ಲಿ ಚಿರತೆಗೆ ಹೋಲಿಸಿದ್ದಾರೆ. ಚಿರತೆಯು ಪ್ರಪಂಚದಲ್ಲೆ ಅತಿ ವೇಗವಾಗಿ ಚಲಿಸುವ ಪ್ರಾಣಿ ಇಂತಹ ಪ್ರಾಣಿಗೆ ರೆಕ್ಕೆ ಕೊಟ್ಟರೆ ಅದು ಇನ್ನೆಷ್ಟು ಜೋರಾಗಿ ವೇಗವಾಗಿ ಚಲಿಸಬಹುದೆಂದು ಆಲೋಚಿಸಿರಿ.

ಅದರಂತೆಯೇ ಅತಿ ವೇಗವಾಗಿ ಅಲೆಕ್ಸಾಂಡರ್ ರಾಜನು ಬಹಳ ಚಿಕ್ಕ ವಯಸ್ಸಿನಲ್ಲಿ ಪ್ರಪಂಚವನ್ನು ಗೆದ್ದು ಸಾಮ್ರಾಟನಾದನು ಮತ್ತು ಈ ಚಿರತೆಗೆ ಇದ್ದ ನಾಲ್ಕು ತಲೆಯು ಗ್ರೀಸ್ ದೇಶದಲ್ಲಿ ಇದ್ದ ನಾಲ್ಕು ಜನರಲ್‌ಗಳಿಗೆ ಹೋಲಿಕೆಯಗಿದೆ. ಇವರು ಗ್ರೀಸ್ ಪ್ರಾಂತ್ಯವನ್ನು ನಾಲ್ಕು ಭಾಗವಾಗಿ ಮಾಡಿಕೊಂಡು ಆಳ್ವಿಕೆ ಮಾಡಿದರು ನಾಲ್ಕನೆ ರಾಜ್ಯ ಕಬ್ಬಿಣ ಕಾಲು ಮತ್ತು ಬೆರಳುಗಳನ್ನು ಜೇಡಿ ಮಿಶ್ರಿತ ಕಬ್ಬಿಣ ಇದನ್ನು ರೋಮ್ ರಾಜ್ಯಕ್ಕೆ ಹೋಲಿಸಿದ್ದಾರೆ. ಇದನ್ನು 7ನೇ ಅಧ್ಯಯದಲ್ಲಿ ವಿಲಕ್ಷಣ ಮೃಗಕ್ಕೆ ಹೋಲಿಸಿದ್ದಾರೆ.

ಜೇಡಿ ಮಿಶ್ರಿತ ಕಬ್ಬಿಣದ ಕಾಲಿನ ಬೆರಳುಗಳನ್ನು ಮೃಗದ 10 ಕೊಂಬುಗಳಿಗೆ ಹೊಲಿಸಲಾಗಿದೆ ದಾನಿಯೇಲ 7:24. ಮೃಗ ಎಂದರೆ ರಾಜ್ಯ ಮತ್ತು ಈ ರೋಮ್ ರಾಜ್ಯದಲ್ಲಿ 10ಕೊಂಬುಗಳು ಅಂದರೆ 10 ಮಂದಿ ಅರಸುಗಳು ಆಳುವರು ಮತ್ತು 10 ಕೊಂಬುಗಳು ಅಂದರೆ 10 ಮಂದಿ ಅರಸುಗಳು ಏಳುವರು ಮತ್ತು 10 ಕೊಂಬುಗಳ ರೋಮ್ ರಾಜ್ಯದ 10 ಭಾಗವನ್ನು ಸೂಚಿಸುತ್ತದೆ. ಈಗಲೂ ಸಹ ಈ ರಾಜ್ಯಗಳನ್ನು ನಾವು ರೋಮ್‌ನಲ್ಲಿ ನೋಡಬಹುದು. ಇದಲ್ಲದೆ ಆ 10ಕೊಂಬುಗಳ ನಡುವೆ ಒಂದು ಚಿಕ್ಕ ಕೊಂಬು ಮೊಳೆಯಿತು ಎಂಬುದಾಗಿ ಓದುತ್ತೇವೆ ಇದರ ನಿಮಿತ್ತ 3 ಕೊಂಬುಗಳು ಬೇರು ಸಹಿತ ಕೀಳಲ್‌ಪಟ್ಟವು ಇದರ ಅರ್ಥವೇನೆಂದರೆ ಈ 10 ರಾಜರ ನಡುವೆ ಮತ್ತೊಬ್ಬ ರಾಜನು ಪ್ರಾಬಲ್ಯಕ್ಕೆ ಬರುವನ್ನು ಇವನ ದೆಸೆಯಿಂದ 10 ರಾಜ್ಯಗಳಲ್ಲಿ 3 ರಾಜ್ಯಗಳು ಬೇರು ಸಹಿತ ನಾಶವಾಗುವುದು ಈ ರಾಜನು ಮುಂಚೆ ಇದ್ದ 10 ಅರಸಗಳಿಗಿಂತ ವಿಭಿನ್ನ ಮತ್ತು ವಿಲಕ್ಷಣವಾಗಿದ್ದನು. ಹಾಗಿದ್ದರೆ ಈ ಚಿಕ್ಕ ಕೊಂಬು ಯಾವುದು ಎಂದು ನೋಡುವುದಾದರೆ ಇದೇ ಆ **"ಪೋಪಸಿ"** ಅಂದರೆ ಪೂಪನ ಆಳ್ವಿಕೆ ಎಂದರ್ಥ ಹೇಗೆ ಹಿಂದು ಮತವನ್ನು ಅನುಸರಿಸುವವರನ್ನು ಹಿಂದುಗಳೆಂದು ಕರೆಯುತ್ತೆವೆಯೂ ಅದರಂತೆ ರೋಮ್ ದೇಶದಲ್ಲಿ ಪೋಪನಿಸಂನಲ್ಲಿದ್ದ ಆಚಾರ ವಿಚಾರವನ್ನು ಕ್ರೈಸ್ತ ಧರ್ಮದಲ್ಲಿ ಆಳವಡಿಸಿಕೊಂಡಿದ್ದರಿಂದ ಇವರನ್ನು ಮೊದಲು ಪೊಪೆಸಿ ಎಂದು ಕರೆಯುತ್ತಿದ್ದರು ಇದು ಪೊಪನ ಆಳ್ವಿಕೆಯನ್ನು ಒಳಗೊಂಡಿತ್ತು ಎಂಬುದನ್ನು ನೋಡುತ್ತೇವೆ. ಇದು ಪ್ರಾಬಲ್ಯಕ್ಕೆ ಬಂದಾಗ 3 ರಾಜ್ಯಗಳು ತಮ್ಮ ಆಸ್ತಿತ್ವವನ್ನು ಸಂಪೂರ್ಣವಾಗಿ ಕಳೆದು ಕೊಂಡವು ಆ ರಾಜ್ಯಗಳು ಯಾವುವೆಂದರೆ **ಹೆರುಳಿ** (Heruli) ರಾಜ್ಯ, ಎರಡನೆ ರಾಜ್ಯವು **ವೆಸ್ಟರನ್ ಎಂಪೈರ್** (Western Empire) ಮತ್ತು ಮೂರನೇ ರಾಜ್ಯ **ಆಷ್ಟ್ರಗೋಥ್** (Ostrogoths) ಈ ಮೂರು ರಾಜ್ಯಗಳು ಬಿದ್ದ ನಂತರ ಪೊಪಸಿಯ ಬಹಳ ಪ್ರಾಬಲ್ಯಕ್ಕೆ ಬಂತು ಎಂದು ನೋಡುತ್ತೆವೆ.

ದಾನಿಯೇಲ 7:26,25 ಈ ಕೊಂಬಿನಲ್ಲಿ ಮನುಷ್ಯರಿಗಿರುವಂತಹ ಕಣ್ಣು ಮತ್ತು ಬಡಾಯಿ ಕೊಚ್ಚಿಕೊಳ್ಳುವಂತಹ ಬಾಯಿ ಇದ್ದವು. ವಚನ 25 ರಲ್ಲಿ ಕೊಂಬುಗಳ ಪರತ್ಪಾರನಾದ ದೇವರ ವಿರುದ್ದ ಬಡಾಯಿ ಕೊಚ್ಚಿಕೊಂಡಿತು ಎಂದು ಓದುತ್ತೇವೆ. ಪೂಪನು ದೇವರ ವಿರುದ್ದ ಬಡಾಯಿ ಕೊಚ್ಚಿಕೊಂಡಿತು ಎಂದು ಓದುತ್ತೇವೆ. ಪೂಪನು ದೇವರ ವಾಕ್ಯಕ್ಕೆ ಮತ್ತು ಸತ್ಯಕ್ಕೆ ವಿರುದ್ದವಾದ ವಿಷಯಗಳನ್ನು, ಸುಳ್ಳು ಭೋದನೆಗಳನ್ನು ತಂದು ಆತನೆ ಭೂಲೋಕದಲ್ಲಿ ದೇವರ ಪ್ರತಿನಿಧಿ ಎಂದು ಕೊಚ್ಚಿಕೊಂಡನೆಂಬುದಾಗಿ ನೋಡುತ್ತೇವೆ. ಕಟ್ಟಲೆಗಳು, ಧರ್ಮವಿದಿ, ನ್ಯಾಯ ಪ್ರಮಾಣಗಳನ್ನು ಮಾರ್ಪಡಿಸಿದರು ಉದಾ:– ಸತ್ಯವೇದದಲ್ಲಿ ಇಲ್ಲದಿರುವ ಕೆಲವು ಕ್ರಮಗಳನ್ನು ತಂದದ್ದು– ವಿಗ್ರಹರಾದನೆ. ಪರಲೋಕ ರಾಜ್ಯದ ಬೀಗದ ಕೈಯನ್ನು ಪೇತ್ರನು ಇವರಿಗೆ ಕೊಟ್ಟಿದ್ದಾನೆಂದು ಹೇಳಿಕೊಳ್ಳುತ್ತಾರೆ. ಇವರಿಗೆ ಜನರನ್ನು ಸ್ವರ್ಗಕ್ಕೂ ನರಕಕ್ಕೂ ಕಳಿಸುವ ಹಕ್ಕಿರುವುದೆಂದು ಹೇಳಿಕೊಳ್ಳುತ್ತಾನೆ. ಉದಾ:–2 ಪಾಪಕ್ಷಮಾಪಣ ಪತ್ರ ಅವರ ಪಾಪಗಳಿಗೆ ತಕ್ಕಂತೆ ದುಡ್ಡುಕೊಟ್ಟು ಪಾಪಕ್ಷಮಾಪಣಾ ಪತ್ರವನ್ನು ಕೊಂಡುಕೊಂಡರೆ ಅವರ ಪಾಪಗಳು ಕ್ಷಮಿಸಲ್ಪಡುತ್ತದೆ ಎಂಬ ಪದ್ದತಿ ಮತ್ತು ಪಾಪದ ಅರಿಕೆ ಪದ್ದತಿ ಯೇಸು ಸ್ವಾಮಿಯ ಈಡುಬಲಿಯನ್ನು ಅಲ್ಲಗೆಳೆಯುವಂತೆ ಮಾಡಿದ್ದಾರೆ ಹೀಗೆ ಇವರು ಬಡಾಯಿ ಕೊಚ್ಚಿಕೊಳ್ಳುವವರಾದರು.

ಮನುಷ್ಯ ಕಣ್ಣು ಇವರಿಗಿತ್ತು ಇದು ಇವರಿಗೆ ದೇವರ ಜ್ಞಾನವಿಲ್ಲದ ಕಾರಣ ಇವರಿಗೆ ತೋಚಿದ ಪದ್ದತಿಯನ್ನು ಸತ್ಯವೇದದಲ್ಲಿ ಇರದ ಸುಳ್ಳು ನಂಬಿಕೆಯನ್ನು ಜನರಲ್ಲಿ ಬಿತ್ತಿದರು ಆಕಾಲದಲ್ಲಿ ಸತ್ಯವೇದವನ್ನು ತರ್ಜಿಮೆ ಮಾಡಿದವರನ್ನು ಜೀವಂತವಗಿ ಆ ಪುಸ್ತಕದ ಜೊತೆಯೇ ಸುಟ್ಟು ಬಿಡುತ್ತಿದ್ದರು ಹೀಗೆ ಕ್ರಿಸ್ತನ ಹೆಸರಿನಲ್ಲಿ ಕ್ರೈಸ್ತರಿಗೆ ಹಿಂಸೆ ಮಾಡಿದರು.

ಉದಾ:3 ರೋಸರಿ(ಜಪಮಾಲೆ) ಹೇಳಿದನ್ನೆ ಹೇಳುವುದು ಇದರಿಂದ ಪಾಪ ಪರಿಹಾರವಾಗುತ್ತದೆ ಮತ್ತು ಬೇಗನೆ ಪರಲೋಕಕ್ಕೆ ಹೋಗಿ ಸೇರುವೆವು ಎನ್ನುವ ನಂಬಿಕೆ ಮತ್ತಾಯ 6:7: ಹೇಳಿದನ್ನೇ ಸುಮ್ಮ ಸುಮ್ಮನೆ ಹೇಳುವವರು ಮೂರ್ಖರು ಎಂಬುದಾಗಿ ಬರೆದಿದೆ.

ಉದಾ:4 ಬಾಳ ದೇವರನ್ನು ಪ್ರೀತಿಸಿದ ಬಾಳನ ಭಕ್ತರು ಮತ್ತು ಎಲೀಷನ ಪ್ರಾರ್ಥನೆ ಸತ್ಯವೇದವನ್ನು ಯಾರಿಗೂ ಓದಲಾಗದ ಲ್ಯಾಟಿನ್ ಭಾಷೆಯಲ್ಲಿ ಬರೆಸಿದರು ಇದನ್ನು ಯಾರಾದರು ಬರೆಯಬಹುದಾದಂತಹ ಇತರ ಭಾಷೆಗಳಿಗೆ ತರ್ಜಿಮೆ ಮಾಡಿದರೆ ಅಂತವರನ್ನು ಜೀವಂತವಾಗಿ ಸುಟ್ಟುಬೀಡುತ್ತಿದ್ದರು 1260 ವರ್ಷಗಳು ಲ್ಯಾಟಿನ್ ಭಾಷೆಗಳಲ್ಲಿಯೇ ಸತ್ಯವೇದವನ್ನು ಓದಿ ಹೇಳುತ್ತಿದ್ದರು ಇದು ಅಂದಿನ ಜನರಿಗೆ ಅರ್ಥವಾಗದ ಭಾಷೆಯಾಗಿತ್ತು ಎಂದು ನೋಡುತ್ತೇವೆ. ಹೀಗೆ ಇವರು ಕಾಲಗಳನ್ನು ಧರ್ಮವಿಧಿಗಳನ್ನು ಮಾರ್ಪಡಿಸಿದರು.

ದಾನಿಯೇಲ 7:25: ಈ ಎಲ್ಲಾ ಕಾರ್ಯಗಳು ನೆಪೋಲಿಯನ್ ಬೋನಾಪಾರ್ಟ್ ರಾಜನಕಾಲದಲ್ಲಿ ಅಂತ್ಯವನ್ನು ಕಂಡಿತ್ತು ಹೇಗೆಂದರೆ ನೆಪೋಲಿಯನು ಪೊಪ್ ಪೈಯಿಸ್ VI ನನ್ನು ಹಿಡಿದು ಸೆರೆಮನೆಗೆ ಹಾಕಿಸಿ ಅವಮಾನಿಸಿದನು ಹೀಗೆ ಪೋಪಸಿಯ ಬಲವು ಕುಂಟಿತವಾಯಿತು ಮತ್ತು ತನ್ನ ಸಾರ್ವಭೌಮತ್ಯದ ರಾಜತ್ವವನ್ನು ಕಳೆದುಕೊಂಡಿತು. ಒಂದು ಕಾಲದಲ್ಲಿ ರಾಜ್ಯಾಡಳಿತವನ್ನು ಪೋಪುಗಳು ತಮ್ಮ ಮುಷ್ಠಿಯಲ್ಲಿ ಇರಿಸಿಕೊಂಡಿದ್ದರು. ಯಾವಾಗ ಪೊಪನನ್ನು ನೆಪೋಲಿಯನನು ಸಾಮಾನ್ಯ ಮುನುಷ್ಯನಂತೆ ಕಂದಾಯವನ್ನು ಕಟ್ಟಲು ಒಪ್ಪದಿದ್ದ ಕಾರಣ ಅವನನ್ನು ಬಂದಿಸಿದಾಗ ಜನರಿಗೆ ಇವರು ಧರ್ಮದ ಹೆಸರಿನಲ್ಲಿ ಮಾಡುತ್ತಿದ್ದ ಮೊಸವು, ಸಳ್ಳು, ವಂಚನೆಗಳು ತಿಳಿದು ಬಂದಿತು ಇವರು ಶಾಪವಾಗಲಿ ಆಶೀರ್ವಾದವಾಗಲಿ ಕೊಡಲು ಸಮರ್ಥವಿಲ್ಲ ಎಂಬುದನ್ನೂ, ಇವರಿಗೆ ದೇವರು ವಿಶೇಷವಾದ ಶಕ್ತಿಯನ್ನು ನೀಡಿಲ್ಲವೆಂಬುದನ್ನು ತಿಳಿದುಕೊಂಡರು ಹೀಗೆ ಅರೆಮನೆಯಿಂದ ಸೆರೆಮನೆಗೆ ಕಳುಹಿಸಲ್ಪಟ್ಟ ಪೋಪ್ ಪೈಯಸ್ VI ಮರಣವನ್ನು ಅನುಭವಿಸಿದನು ಎಂದು ನೋಡುತ್ತೇವೆ.

ದಾನಿಯೇಲ 7:11 ಶಿಲೆಯ ಕನಸ್ಸಿನಲ್ಲಿ ಬಂಡೆಯು ಅಂದರೆ ದೇವರ ರಾಜ್ಯವು ಬಂದು ಹೊಡೆದು ಆ ಎಲ್ಲಾ ರಾಜ್ಯಗಳನ್ನು ಇಲ್ಲದಂತೆ ಮಾಡುವುದಾಗಿ ಓದುತ್ತೇವೆ. ಆದರೆ 7ನೇ ಅಧ್ಯಾಯದಲ್ಲಿ ಈ ವಿಲಕ್ಷಣ ಮೃಗವು ಬಡಾಯಿ ಕೊಚ್ಚಿಕೊಂಡಿದ್ದರಿಂದ ಅದನ್ನು ಕೊಂದು ಅದರ ಹೆಣವನ್ನು ಉರಿಯುವ ಬೆಂಕಿಗೆ ಹಾಕಿ ನಾಶಮಾಡಿದರು. ದಾನಿಯೇಲ 7:26 ಇದರ ಸಂಪೂರ್ಣ ಅರ್ಥವನ್ನು ವಿವರಿಸುತ್ತಾರೆ ಮತ್ತು ದೇವರ ಹಾಗೇ ತನ್ನ ರಾಜ್ಯವನ್ನು ಸ್ಥಾಪಿಸುವರೆಂದು ದಾನಿ 7:13 ನೇ ವಾಕ್ಯದಲ್ಲಿ ಸ್ಪಷ್ಟವಾಗಿ ಓದುತ್ತೇವೆ.

ಆತನು ಈ ರಾಜ್ಯವನ್ನು ಭಕ್ತ ಜನರಿಗೂ, ಕ್ರಿಸ್ತನಿಗೂ ಕೊಟ್ಟು ಬಿಡುವನು ಪ್ರಕಟನೆ 3:21, ಪ್ರಕಟನೆ 20:6. ಇಂತವರ ಮೇಲೆ ಎರಡನೆ ಮರಣದ ಅಧಿಕಾರವಿರುವುದಿಲ್ಲ ಇವರು ಕ್ರಿಸ್ತನ ಜೊತೆ 1000 ವರ್ಷ ಆಳ್ವಿಕೆ ಮಾಡುವರು (ದಾನಿಯೇಲ 7:27). ಹೀಗೆ ಭೂಲೋಕದಲ್ಲಿ ಸ್ಥಾಪಿತವಾಗುವ 5ನೇ ಮಹಾ ಸಾಮ್ರಾಜ್ಯ ಯಾವುದೆಂದರೆ ಅದು ದೇವರ ಸಾಮ್ರಾಜ್ಯ, ಈ ಸಾಮ್ರಾಜ್ಯವನ್ನು ತನ್ನ ಮಗನಾದ ಯೇಸುವಿಗೂ ಮತ್ತು ಆತನ ಸಭೆಗೂ ವಹಿಸುವರು ಇವರು ಈ ಸಾಮ್ರಾಜ್ಯವನ್ನು 1000 ವರ್ಷ ಆಳ್ವಿಕೆ ಮಾಡುವರು ಇದನ್ನೇ ಯೇಸುವು ಹೇಳಿಕೊಟ್ಟ ಪ್ರಾರ್ಥನೆಯಲ್ಲಿ ನಾವು ಹಾರೈಸುವುದು "ನಿನ್ನ ರಾಜ್ಯವು ಬರಲಿ ನಿನ್ನ ಚಿತ್ತವು ಪರಲೋಕದಲ್ಲಿ ನೇರವೇರುವ ಪ್ರಕಾರ ಭೂಲೋಕದಲ್ಲಿಯೂ ನೇರವೇರಲಿ" ಇದೇ ಆ 5ನೇ ಸಾಮ್ರಾಜ್ಯ. ಲೂಕ 4:43 ರಲ್ಲಿ ಹೇಳುವಂತೆ ದೇವರ ರಾಜ್ಯದ ಸುವಾರ್ತೆಯನ್ನು ಕ್ರಿಸ್ತನು ಸಹ ಲೋಕದಲ್ಲಿರುವ ಸಮಯದಲ್ಲಿ ಸಾರಿದರು ಅದರಂತೆ ನಾವು ಸಹ ಆ ದೇವರ ರಾಜ್ಯದ ಸುವಾರ್ತೆಯನ್ನು ಸಾರುವ ಹಂಗಿನವರಾಗಿರಬೇಕು.